**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಯು.ಬಿ ವೆಂಕಟೇಶ್ ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ.127ಕ್ಕೆ ಸರ್ಕಾರದ ಹೇಳಿಕೆ**

**-: ಸೂಚನೆ :-**

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಾಜರಹಳ್ಳಿ ಗ್ರಾಮದ ಸ.ನಂ:64 ರಲ್ಲಿ 4 ಎಕರೆ 11 ಗುಂಟೆ ಜಮೀನು ಶ್ರೀ ಬಾಲಾಜಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಅಶೋಕನಗರ 2ನೇ ಹಂತ, ಬೆಂಗಳೂರು ಇವರಿಗೆ - ಮಂಜೂರಾಗಿದ್ದು, ಈವರೆಗೆ 1 ಎಕರೆ 35 ಗುಂಟೆ ಜಮೀನನ್ನು ಮಾತ್ರ ಸಂಘಕ್ಕೆ ಹಸ್ತಾಂತರಿಸಲಾಗಿದ್ದು, ಉಳಿಕೆ 2 ಎಕರೆ 16 ಗುಂಟೆ ಜಮೀನಿನ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು ಸಂಘದ ಪರವಾಗಿ ಆದೇಶಿಸಿದರು ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿರುವುದಿಲ್ಲ. ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿರುವವರ ಹೆಸರಿನಲ್ಲಿ ಪೋಡಿ ಮಾಡಿರುವ ಕುರಿತು ಮಾನ್ಯ ಕಂದಾಯ ಸಚಿವರನ್ನು ನಿಯಮ 72 ರಡಿಯಲ್ಲಿ ಗಮನ ಸೆಳೆಯ ಬಯಸುತ್ತೇನೆ.

**-: ಹೇಳಿಕೆ :-**

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಾಜರಹಳ್ಳಿ ಗ್ರಾಮದ ಸ.ನಂ.64 ರಲ್ಲಿ ಆಕಾರ್‌ಬಂದಿನಂತೆ ಖುಷ್ಕಿ ಜಮೀನಾಗಿದ್ದು, ದಿನಾಂಕ:09.01.1996ರಲ್ಲಿ ಸ.ನಂ.64/1,2,3 ಎಂದು ಹಿಸ್ಸಾ ಪೋಡಿಯಾಗಿರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ವರದಿಯಂತೆ ಸರ್ಕಾರದ 4(1) ಮತ್ತು 6(1) ಈ ಅಧಿಸೂಚನೆಯಂತೆ ಬೆಂಗಳೂರು ದಕ್ಷಿಣ ತಾಲ್ಲೂಕು, ಉತರಹಳ್ಳಿ ಹೋಬಳಿ, ವಾಜರಹಳ್ಳಿ ಗ್ರಾಮದ ಸ.ನಂ.64 ರಲ್ಲಿ 4-11 ಎ/ಗುಂಟೆ ಜಮೀನು ಶ್ರೀ ಬಾಲಾಜಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ರವರಿಗೆ ಭೂಸ್ವಾಧೀನವಾಗಿದ್ದು, ದಿನಾಂಕ: 31-12-1990 ರಲ್ಲಿ 4-11 ಎ/ಗುಂಟೆ ಜಮೀನಿಗೆ ಒಪ್ಪಿಗೆ ಐತೀರ್ಪು ರಚಿಸಲಾಗಿರುತ್ತದೆ. ಸದರಿ ಐತೀರ್ಪಿನಂತೆ ಖಾತೆದಾರರಾದ ಶ್ರೀ ನರಸಿಂಹಯ್ಯ ರವರು ಜಿ.ಪಿ.ಎ.ದಾರರ ಮುಖಾಂತರ ಭೂಕೋರಿಕಾ ಸಂಸ್ಥೆಯವರಿಂದ ಭೂಪರಿಹಾರವನ್ನು ಪಡೆದಿರುತ್ತಾರೆ.

ಸ.ನಂ.64 ರಲ್ಲಿ 1-35 ಎ/ಗುಂ ಜಮೀನನ್ನು ದಿನಾಂಕ:30-03-1995 ರಂತೆ ಸುಬರ್ದು ನೀಡಲಾಗಿದ್ದು, 16(2) ಅಧಿಸೂಚನೆಯನ್ನು ದಿನಾಂಕ: 07-06-1995 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಉಳಿಕೆ 2-16 ಎ/ಗುಂ ಜಮೀನನ್ನು ಭೂಸ್ವಾಧೀನದಿಂದ ಕೈಬಿಡಲು ಸರ್ಕಾರದ ಮಟ್ಟದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಅದರಂತೆ ಭೂಸ್ವಾಧೀನ ಕಾಯ್ದೆ ಕಲಂ 47 ರಂತೆ ಉಪವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ ಉಪವಿಭಾಗ, ಬೆಂಗಳೂರು ರವರಿಗೆ ಪ್ರಶ್ನಿತ 2-16 ಎ/ಗುಂ ಜಮೀನಿನ ಸುಪರ್ದನ್ನು ಪಡೆದು ಭೂಕೋರಿಕಾ ಸಂಸ್ಥೆಯವರಿಗೆ ವಹಿಸಿಕೊಡುವಂತೆ ದಿನಾಂಕ:14.01.1999, 17.03.1999 ಮತ್ತು 20.04.1999 ರಂದು ಬರೆಯಲಾಗಿರುತ್ತದೆ.

ಉಪವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ ಉಪವಿಭಾಗರವರು ಸಲ್ಲಿಸಿರುವ ವರದಿಯಲ್ಲಿ ಸಂಘದವರು ಉಳಿಕೆ ವಿಸ್ತೀರ್ಣ 2-16 ಎ/ಗು ಸಂಘಕ್ಕೆ ಅವಶ್ಯಕತೆ ಇಲ್ಲವೆಂದು ತಿಳಿಸಿರುವುದರಿಂದ ಸದರಿ ಜಮೀನನ್ನು ಭೂಮಾಲೀಕರಿಗೆ ಬಿಟ್ಟುಕೊಡಲು ಹಿಂದಿನ ಶಾಸಕರು ಮತ್ತು ಲೋಕಸಭೆಯ ಸದಸ್ಯರು ಶಿಫಾರಸ್ಸು ಮಾಡಿ ಪತ್ರ ಬರೆದಿರುವುದು ಕಂಡುಬಂದಿರುತ್ತದೆ. ಸಂಬಂಧಿಸಿದ ಸಂಘದವರು ಸ್ವಾಧೀನಪಡೆಯದೇ ಇರುವುದರಿಂದ ಪ್ರಸ್ತುತ ಜಮೀನು ಹಿಡುವಳಿ ಜಮೀನಾಗಿರುವ ಪ್ರಯುಕ್ತ ಸದರಿ ಜಮೀನನ್ನು ಭೂಮಾಲೀಕರ ಸ್ವಾಧೀನಕ್ಕೆ ಒಳಪಟ್ಟ ಜಮೀನಾಗಿರುತ್ತದೆ.

**ಸಂಖ್ಯೆ:ಕಂಇ 105 ಎಸ್‌ಎಸ್‌ಸಿ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು